**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 567/2019**

**ಸಾಕ್ಷಿಗೆ ದಿನಾಂಕಃ 22.3.2022 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲಿಂಗರಾಜು | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ದೇವಪ್ಪ | ಸಿ.ಡಬ್ಲ್ಯೂ-1 |
| ವಯಸ್ಸು | : | 52 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕೋಹಳ | |

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಮೃತ ನಾಗರಾಜು ನನ್ನ ಮಗ. ದಿನಾಂಕ 25.10.2017 ರಂದು ನನ್ನ ಮಗನಿಗೆ ಜ್ವರ ಬಂದಿರುತ್ತದೆ, ಆತನಿಗೆ ಚಿಕಿತ್ಸೆ ಕೊಡಿಸಲು ಈ ಕೇಸಿನ ಆರೋಪಿ ಮಾರ್ಚಳ್ಳಿಯಲ್ಲಿ ಇಟ್ಟಿರುವ ಕ್ಲಿನಿಕ್ ಗೆ ಕರೆದುಕೊಂಡು ಹೋಗಿರುತ್ತೇನೆ. ಆರೋಪಿ ನನ್ನ ಮಗನನ್ನು ಪರೀಕ್ಷಿಸಿ ಎರಡು ಇಂಜಕ್ಷನ್‌ಗಳನ್ನು ಕುಂಡಿಗಳಿಗೆ ನೀಡಿರುತ್ತಾರೆ. ಮರುದಿನ ನನ್ನ ಮಗನಿಗೆ ಇಂಜೆಕ್ಷನ್ ಮಾಡಿದ ಸ್ಥಳದಲ್ಲಿ ಊತ ಬಂದಿರುತ್ತದೆ, ಆ ಕಾರಣ ನನ್ನ ಮಗನನ್ನು ಅರೋಪಿ ಬಳಿಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಆರೋಪಿ ನನ್ನ ಮಗನನ್ನು ಪರೀಕ್ಷಿಸಿ ಉಪ್ಪಿ ನ ಅಥವಾ ಬಿಸಿನೀರಿನ ಕಾವು ನೀಡಿ ಸರಿ ಹೋಗುತ್ತದೆ ಎಂದು ಹೇಳಿ ಮಾತ್ರೆಗಳನ್ನು ನೀಡಿರುತ್ತಾರೆ. ನನ್ನ ಮಗನಿಗೆ ಹೆಚ್ಚಿನ ನೋವು ಇದ್ದ ಕಾರಣ ಆರೋಪಿ ಬಳಿ ಕರೆದುಕೊಂಡು ಹೋಗಿರುತ್ತೇನೆ. ಆರೋಪಿ ನನ್ನ ಮಗನಿಗೆ ಚಿಕಿತ್ಸೆ ನೀಡದೇ ಹೆಚ್ಚಿ ನ ಚಿಕಿತ್ಸೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ನಾನು ನನ್ನ ಮಗನನ್ನು ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಆಗ ಅತನನ್ನು ಅಸ್ಪತ್ರೆಯಲ್ಲಿ ದಾಖಲು ಮಾಡಿರುತ್ತೇನೆ, ಆಗ ವೈದ್ಯರು ನನ್ನ ಮಗನಿಗೆ ಇಂಜಕ್ಷನ್ ನೀಡಿದ ಸ್ಥಳದಲ್ಲಿ ಗ್ಯಾಸ್ ಗ್ಯಾಂಗ್ರಿನ್ ಆಗಿರುತ್ತದೆ ಎಂದು ಹೇಳಿ ನನ್ನ ಮಗನು ಉಳಿಯುವುದು ಕಷ್ಟ ಎಂದು ಹೇಳಿರುತ್ತಾರೆ. ಅಲ್ಲಿಂದ ನಾನು ಹೆಚ್ಚಿ ನ ಚಿಕಿತ್ಸೆಗೆ ಆತನನ್ನು ಮೈಸೂರಿನ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ ನನ್ನ ಮಗನಿಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾನೆ. ಆರೋಪಿ ಆಗ ನಮ್ಮ ಬಳಿ ಬಂದು ನೀವು ದೂರನ್ನು ಕೊಡಬೇಡಿ, ನಾನು ನಿಮಗೆ ಪರಿಹಾರ ಹಣ ನೀಡುತ್ತೇನೆ ಎಂದು ಹೇಳಿ, ನಮಗೆ ಒಂದು ಕರಾರುಪತ್ರ ಬರೆದುಕೊಟ್ಟಿರುತ್ತಾರೆ, ಆದರೆ ನಮಗೆ ಯಾವುದೇ ಹಣ ನೀಡಿರುವುದಿಲ್ಲ. ಆರೋಪಿ ಮಾತನ್ನು ಕೇಳಿಕೊಂಡು ನನ್ನ ಮಗನನ್ನು ದಿನಾಂಕ 28.10.2017 ರಂದು ದಫನ್ ಮಾಡಿರುತ್ತೇವೆ. ಆರೋಪಿ ತಾನು ಹೇಳಿದಂತೆ ನಮಗೆ ಪರಿಹಾರ ನೀಡದ ಕಾರಣ ಪೋಲಿಸ್ ಠಾಣೆಗೆ ಹೋಗಿ ಆರೋಪಿ ವಿರುದ್ಧ ದಿನಾಂಕ 26.3.2018 ರಂದು ದೂರು ನೀಡಿರುತ್ತೇನೆ. ಮರುದಿನ ನಾನು ಪೋಲಿಸರನ್ನು ಕರೆದುಕೊಂಡು ಹೋಗಿ ಆರೋಪಿ ಮನೆ ತೋರಿಸಿರುತ್ತೇನೆ. ಪೋಲಿಸರು ನನ್ನ ಮಗನನ್ನು ದಫನ್ ಮಾಡಿದ ಸ್ಥಳಕ್ಕೆ ಬಂದು ನನ್ನ ಮಗನ ಶವವನ್ನು ತೆಗೆದು ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗಿರುತ್ತಾರೆ ಹಾಗೂ

ಪಂಚನಾಮೆ ಜರುಗಿಸಿರುತ್ತಾರೆ. ಆರೋಪಿ ನನ್ನ ಮಗನ ಸಾವಿಗೆ ಕಾರಣಕರ್ತನಾಗಿರುತ್ತಾನೆ, ಆತ ನಕಲಿ ವೈದ್ಯನಾಗಿದ್ದು ನನ್ನ ಮಗನಿಗೆ ತಪ್ಪಾಗಿ ನೀಡಿದ ಇಂಜಕ್ಷನ್ ನಿಂದ ನನ್ನ ಮಗ ಮೃತಪಟ್ಟಿರುತ್ತಾನೆ. ಸಾಕ್ಷಿ ದೂರು, ಸ್ಥಳ ಮತ್ತು ಶವವನ್ನು ದಫನ್ ಮಾಡಿದ ಸ್ಥಳದ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ರಿಂದ ನಿಪಿ3 ಎಂದು, ಸಾಕ್ಷಿ ಸಹಿಯನ್ನು ನಿಪಿ1 ಎ ರಿಂದ ನಿಪಿ3 ಎ ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಮಗನ ಶವ ಪಂಚನಾಮೆಯನ್ನು ಸಹ ಜರುಗಿಸಿರುತ್ತಾರೆ, ಅದನ್ನು ನಿಪಿ4 ಎಂದು, ಸಾಕ್ಷಿ ಸಹಿಯನ್ನು ನಿಪಿ4 ಎ ಎಂದು ಗುರುತಿಸಲಾಯಿತು. ಶವ ಹೂತಿದ್ದ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ5 ರಿಂದ ನಿಪಿ14 ಎಂದು ಗುರುತಿಸಲಾಯಿತು. ಅರೋಪಿ ನೋಡಿದರೆ ಗುರುತಿಸುತ್ತೇನೆ, ಈ ದಿನ ನ್ಯಾಯಾಲಯದ ಮುಂದಿರುತ್ತಾನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ